ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ ೨೫ನೇ ಆಗಸ್ಟ್ ೧೯೯೪, ಭಾದ್ರಪದ, ಶಕ ೧೯೧೬

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೧೦ ಗಂಟೆಗೆ ಸಮಾವೇಶಗೊಂಡಿತ್ತು

ಅಧ್ಯಕ್ಷರು : (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ನಿಲುವಳಿ ಸೂಚನೆ

ದಿನಾಂಕ 15-8-94ರಂದು ಹುಬ್ಬಳ್ಳಿಯಲ್ಲಿ ನಡೆದ ಗೋಲಿಬಾರ್ ಬಗ್ಗೆ

+ ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಆಗಸ್ಟ್ 15 ರಂದು ಹುಬ್ಬಳ್ಳಿಯಲ್ಲಿ ರಾಷ್ಟ್ರಧ್ವಜಾರೋಹಣ ಸಂದರ್ಭದಲ್ಲಿ ಗೋಲಿಬಾರ್ ಆಗಿದೆ. ಅದರ ಬಗ್ಗೆ ಇಲ್ಲಿ ಚರ್ಚೆ ಮಾಡಬೇಕೆಂದು ನಿಲುವಳಿ ಸೂಚನೆಯನ್ನು ಕಳಿಸಿದ್ದೇವೆ. ತಾವು ದಯಮಾಡಿ ಪ್ರಶ್ನೋತ್ತರ ಕಾಲವನ್ನು ಸಸ್ಪೆಂಡ್ ಮಾಡಿ ನಿಲುವಳಿ ಸೂಚನೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಲೋಕಸಭೆ, ರಾಜ್ಯಸಭೆಯಲ್ಲಿ ಇದರ ಬಗ್ಗೆ ಅನೇಕ ಚರ್ಚೆಗಳಾಗಿವೆ. ಇಂತಹ ಮಹತ್ವವಾದ ವಿಷಯ ದೇಶದ ಜನರ ಗಮನವನ್ನು ಸೆಳೆದಿದೆ. ದೇಶದ ಜನರ ಗಮನ ಸೆಳೆದಿರತಕ್ಕ ಈ ಹುಬ್ಬಳ್ಳಿಯಲ್ಲಿ ಏನು ಘಟನೆ ಆಗಿದೆ ಇದನ್ನು ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು. ಹಿಂದೆ ಪ್ರಶ್ನೋತ್ತರ ಕಾಲವನ್ನು ಸಸ್ಪೆಂಡ್ ಮಾಡಿ ಮಹತ್ವವಾದ ವಿಷಯದ ಬಗ್ಗೆ ಚರ್ಚೆ ನಡೆದಿದೆ. ಅದಕ್ಕೆ ನಾನು ವಿನಂತಿ ಮಾಡುತ್ತಿದ್ದೇನೆ. ಅದು ತಮ್ಮ ಡಿಸ್ಕ್ರಿಷನ್ಗೆ ಬಿಟ್ಟಿದ್ದು, ಹಿಂದೆ ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ ಮಾಡಬೇಕೆಂದಾಗ ತಾವೇ ಅವಕಾಶ ಮಾಡಿಕೊಟ್ಟಿದ್ದೀರಿ. ಇದು ಅತ್ಯಂತ ಮಹತ್ವದ ವಿಷಯ. ದಯಮಾಡಿ ಈ ನಿಲುವಳಿ ಸೂಚನೆಯನ್ನು ಮೊದಲು ಆದ್ಯತೆ ಮೇಲೆ ತೆಗೆದುಕೊಳ್ಳಬೇಕು.

(ಪ್ರಶ್ನೋತ್ತರ ಕಾಲವನ್ನು ಸಸ್ಪೆಂಡ್ ಮಾಡಬೇಕು ಎಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.)

ಅಧ್ಯಕ್ಷರು : ಪ್ರಶ್ನೋತ್ತರ ಮುಗಿಯಲಿ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಿಲುವಳಿ ಸೂಚನೆಯನ್ನು ನಾವುಗಳೂ ಕಳಿಸಿದ್ದೇವೆ. ಒಟ್ಟಿಗೆ ಯಾವ ರೀತಿ ತೆಗೆದುಕೊಳ್ಳಬೇಕೆಂದು ವಿಚಾರ ಮಾಡಿ ಪ್ರಶ್ನೋತ್ತರ ಕಾಲವನ್ನು ರದ್ದು ಮಾಡುವುದು ಒಳ್ಳೆಯದು. ಇದರ ಜೊತೆಯಲ್ಲಿ ಮತ್ತೊಂದು ಮೂಲಭೂತವಾದ ಪ್ರಶ್ನೆಯನ್ನು ನಾನು ಕೇಳಬೇಕೆಂದಿದ್ದೇನೆ. ಶಾಸನ ಸಭೆಯನ್ನು ಯಾವ್ಯಾವಾಗ ಕರೆಯಬೇಕೆಂದು ನೀತಿ ಏನಾದರೂ ಇದೆಯೇ? ಸರಕಾರ ತಮ್ಮ ಇಚ್ಛೆ ಬಂದ ಹಾಗೆ ಶಾಸನ ಸಭೆ ಕರೆಯುವುದು, ತಮಗೆ ಇಚ್ಛೆ ಬಂದ ಹಾಗೆ ಮುಂದಕ್ಕೆ ಹಾಕುವುದು ಇದು ಸರಿಯಲ್ಲ. ಪರಮ ಪವಿತ್ರವಾದಂತಹ ಪ್ರಜಾಪ್ರಭುತ್ವದ ಈ ದೇಗುಲಕ್ಕೆ ದೊಡ್ಡ ಭ್ರಷ್ಟಾಚಾರವಾದ ಹಾಗಾಗುತ್ತದೆ. ಲೋಕಸಭೆಯಲ್ಲಿ ಇಂತಿಂತಹ ಕಾಲಕ್ಕೆ ಕರೆಯಬೇಕೆಂದು ಇದೆ. ಶಾಸನ ಸಭೆಯನ್ನು ತನ್ನ ಇಚ್ಛೆಗೆ ತಕ್ಕಂತೆ ಸರಕಾರ ಕರೆಯುವುದಾದರೆ ನಾವೇಕೆ ಇಲ್ಲಿ ಶಾಸಕರಾಗಿ ಇರಬೇಕು, ಯಾವ ಉದ್ದೇಶಕ್ಕೆ ಶಾಸಕರಾಗಿ ಇಲ್ಲಿ ಇರಬೇಕು. ಇದಕ್ಕೆ ಪರಮ ಪಾವಿತ್ರ್ಯತೆ ಇದೆ. ವೈಯಕ್ತಿಕವಾಗಿ ನಾನು ಆರೋಪಣೆ

ಮಾಡುತ್ತಿಲ್ಲ. ಮಾನ್ಯ ಸಂಸದೀಯ ಸಚಿವರಾದ ಶ್ರೀ ಹಾರನಹಳ್ಳಿ ರಾಮಸ್ವಾಮಿಯವರು ಇಲ್ಲಿ ಕುಳಿತಿದ್ದಾರೆ, ಅವರು ಹೇಳಲಿ. ಈ ಸಲ ಆಯವ್ಯಯದ ಬಗ್ಗೆ ಎಲ್ಲಿ ಚರ್ಚೆಯಾಯಿತು, ಏನು ಆಗಿಲ್ಲ. ಇಡೀ ಕರ್ನಾಟಕದಲ್ಲಿ ಶಾಸನ ಸಭೆಯೇ ಇಲ್ಲವೆನ್ನುವ ರೀತಿಯಲ್ಲಿ ಆಗಿದೆ. ಆದ್ದರಿಂದ ನಾನು ತಮ್ಮಲ್ಲಿ ಕಳಕಳಿಯ ವಿನಂತಿ ಮಾಡುತ್ತಿದ್ದೇನೆ.....

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಸದನ ಅಭಿಪ್ರಾಯಪಟ್ಟರೆ ಪ್ರಶ್ನೋತ್ತರ ಕಾಲವನ್ನು ಸಸ್ಪೆಂಡ್ ಮಾಡಿ ಆಗಸ್ಟ್ 15 ರಂದು ಹುಬ್ಬಳ್ಳಿಯಲ್ಲಿ ನಡೆದಿರುವ ಗೋಲಿಬಾರಿನ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬಹುದು. ಸಭೆಯ ಅಭಿಪ್ರಾಯ ಕೇಳಿ. ಸದನ ಒಕ್ಕೊರಲಿನಿಂದ ಇದನ್ನು ತೆಗೆದುಕೊಳ್ಳುವುದು ಅಗತ್ಯವಿದೆ ಎಂದು ಹೇಳಿದರೆ ಪ್ರಶ್ನೋತ್ತರವನ್ನು ಸಸ್ಪೆಂಡ್ ಮಾಡಿ ಅತ್ಯಂತ ಮಹತ್ವವಾದ ಘಟನೆ ಹುಬ್ಬಳ್ಳಿಯಲ್ಲಿ ಏನು ನಡೆದಿದೆ 5 ಜನರ ಮಾರಣ ಹೋಮ ಆಗಿದೆ, ಕಗ್ಗೊಲೆ ಆಗಿದೆ. ಅದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬಹುದು. ರಾಷ್ಟ್ರದಾದ್ಯಂತ ಪ್ರಮುಖವಾಗಿ ಚರ್ಚೆಯಾಗಿದೆ ಸದನದ ಅಭಿಪ್ರಾಯ ಕೇಳಿ ತಮಗೆ ಅಧಿಕಾರ ಇದೆ.

ಅಧ್ಯಕ್ಷರು : ಪ್ರಶ್ನೋತ್ತರ ಕಾಲ ಮುಗಿಯಲಿ.

ಶ್ರೀ ವಾಟಾಳ್ ನಾಗರಾಜ್ : ಅತ್ಯಂತ ಮಹತ್ವವಾದ ಘಟನೆ ಹುಬ್ಬಳ್ಳಿಯಲ್ಲಿ ನಡೆದಿದೆ. 5 ಜನರ ಕಗ್ಗೊಲೆಯಾಗಿದೆ. ಗೋಲಿಬಾರ್‌ಗಿಂತ ಪ್ರಾಮುಖ್ಯವಾದ ಪ್ರಶ್ನೆ ಯಾವುದು ಇದೆ. ಅದರ ಬಗ್ಗೆ ಸದನದ ಅಭಿಪ್ರಾಯ ಕೇಳಿ.

ಅಧ್ಯಕ್ಷರು : ಪ್ರಶ್ನೋತ್ತರ ಮುಗಿದ ನಂತರ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಶಾಸನ ಸಭೆಯನ್ನು ತಮ್ಮ ಇಚ್ಛೆಗೆ ತಕ್ಕಂತೆ ಬಳಸಿಕೊಳ್ಳುವುದು ನನಗೆ ನೋವಾಗಿದೆ. ಅಷ್ಟು ಹಿಡಿಸುತ್ತಿಲ್ಲ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಇಲ್ಲಿ ಕುಳಿತಿದ್ದಾರೆ, ಅವರೇ ಹೇಳಲಿ. ಯಾವಾಗ ಶಾಸನ ಸಭೆ ಕರೆಯಬೇಕೆಂಬುದನ್ನು ಅವರೇ ಹೇಳಲಿ. ನಮ್ಮ ಹಕ್ಕು ಮೊಟಕಾದಂತಾಗಿದೆ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಏತಕ್ಕೋಸ್ಕರ ಈ ಸಭೆಯನ್ನು ಮುಂದೂಡಲಾಗಿದೆ ಎಂದು ಹೇಳಲಿ. ನಾನು ಸಭಾತ್ಯಾಗ ಮಾಡುತ್ತೇನೆ. ನನಗೆ ಬಹಳ ನೋವಾಗುತ್ತಿದೆ.

ಅಧ್ಯಕ್ಷರು : ಪ್ರಶ್ನೋತ್ತರ ಮುಗಿದ ನಂತರ ಕೇಳಿ ನಾನು ಅವಕಾಶ ಕೊಡುತ್ತೇನೆ.

(ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು ಮತ್ತು ತಮ್ಮ ಸ್ಥಳದಿಂದ ಹೊರಗೆ ಬಂದು ಮಾತನಾಡತೊಡಗಿದರು)

ಶ್ರೀ ಬಿ.ಹೆಚ್. ಬನ್ನಿಕೋಡ್ : ನನಗೆ ಅವಕಾಶ ಮಾಡಿಕೊಡಬೇಕು ನಾವು ಗೋಲಿಬಾರಿನ ಬಗ್ಗೆ ಚರ್ಚೆ ಮಾಡಲು ನಿಲುವಳಿ ಸೂಚನೆ ಕಳಿಸಿದ್ದೇವೆ. ಪ್ರಶ್ನೋತ್ತರ ಸಮಯ ಮುಗಿದ ನಂತರ ಅವಕಾಶ ಕೊಟ್ಟರೆ ಅಡ್ಡಿ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಇಲ್ಲಿ ಎರಡು ವಿಚಾರಗಳು ಇವೆ. ಒಂದು, ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಎತ್ತಿರತಕ್ಕಂಥದ್ದು ಅತ್ಯಂತ ಮುಖ್ಯವಾದ ವಿಚಾರ ಮತ್ತು ಔಚಿತ್ಯಪೂರ್ಣವಾದಂಥ ವಿಚಾರ. ಅದಕ್ಕೆ ಅವಕಾಶ ಮಾಡಿಕೊಡಿ. ಎರಡನೆಯದು, ನಾವೇನು ಅಡ್ಜರ್ನ್‌ಮೆಂಟ್ ಮೋಷನನ್ನು ಕಳುಹಿಸಿದ್ದೇವೆ, ಅದನ್ನು ಪ್ರಶ್ನೋತ್ತರ ಆದಮೇಲೆ ತೆಗೆದುಕೊಳ್ಳೋಣ. ಅದಕ್ಕೆ ನಮ್ಮದೇನೂ ವಿರೋಧವಿಲ್ಲ. ನಾವೇನು ಪ್ರಶ್ನೋತ್ತರವನ್ನು ಮುಂದಕ್ಕೆ ಹಾಕಿ ಎಂದು ಒತ್ತಾಯ ಮಾಡುವುದಿಲ್ಲ. ಇಲ್ಲಿ ಸಾಕಷ್ಟು ಪ್ರಶ್ನೆಗಳು ಇವೆ. ನಿನ್ನೆಯೂ ಪ್ರಶ್ನೋತ್ತರ ಆಗಿಲ್ಲ. ಇವತ್ತೂ ಆಗಿಲ್ಲ. ಈ ರೀತಿ ದಿನನಿತ್ಯ ಪ್ರಶ್ನೋತ್ತರವನ್ನು ಮುಂದಕ್ಕೆ ಹಾಕುವುದು ಸರಿಯಲ್ಲ. ಹಾಗಾಗಿ

ಶಾಸನಸಭೆಗೆ ಸಂಬಂಧಪಟ್ಟಂಥ ವಿಚಾರಕ್ಕೆ ಒಂದು ದಿವಸವೋ ಅಥವಾ ಅರ್ಧ ಗಂಟೆಯಾದರೂ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಅಕ್ರಮ ದಲಾಲಿ ವಸೂಲಾತಿಯನ್ನು ತಡೆಗಟ್ಟುವುದು

324 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ವ್ಯವಸಾಯೋತ್ಪನ್ನ ಮಾರುಕಟ್ಟೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ರೈತರು ಉತ್ಪಾದನೆಯನ್ನು ಮಾರಾಟ ಮಾಡಿದಾಗ ದಲಾಲರು ರೈತರಿಂದ ಗೈರು ಖಾನೂನಾಗಿ ದಲಾಲಿ ವಸೂಲಿ ಮಾಡುವುದನ್ನು ತಡೆಗಟ್ಟುವುದಕ್ಕೆ ಎ.ಪಿ.ಎಂ.ಸಿ. ಮುಖಾಂತರ ರೈತರ ಉತ್ಪನ್ನದ ಹಣವನ್ನು ಬಟವಾಡೆ ಮಾಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿರುವುದು ನಿಜವೇ;

ಆ) ಹಾಗಿದ್ದಲ್ಲಿ ಇದನ್ನು ಇನ್ನೆಷ್ಟು ದಿನಗಳಲ್ಲಿ ಕಾರ್ಯಗತಗೊಳಿಸಲಾಗುವುದು.

ಇ) ರೈತರಿಗೆ ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿ ಆಗುತ್ತಿರುವ ಶೋಷಣೆಯನ್ನು ತಪ್ಪಿಸುವ ಸಲುವಾಗಿ ಅಲ್ಲಿ ಚುನಾವಣೆ ನಡೆಸಿ ರೈತ ಪ್ರತಿನಿಧಿಗಳಿಗೆ ಅಧಿಕಾರ ಹಸ್ತಾಂತರ ಯಾವಾಗ ಮಾಡಲಾಗುವುದು?

ಶ್ರೀ ರಾಮಲಿಂಗರೆಡ್ಡಿ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಹೌದು.

ಆ) ಈ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದ್ದು ಶೀಘ್ರಕ್ರಮ ಕೈಗೊಳ್ಳಲಾಗುವುದು.

ಇ) ರಾಜ್ಯದಲ್ಲಿ ಮುಂಬರುವ ಸಾರ್ವತ್ರಿಕ ಚುನಾವಣೆಗಳು ಸಮೀಪಿಸುತ್ತಿರುವ ಕಾರಣದಿಂದ ರಾಜ್ಯದಲ್ಲಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಚುನಾವಣೆ ನಡೆಸಲು ಸಾಧ್ಯವಾಗಲಾರದೆಂದು ಸರ್ಕಾರವು ತೀರ್ಮಾನ ತೆಗೆದುಕೊಂಡಿದೆ.

ಶ್ರೀ ಡಿ.ಆರ . ಪಾಟೀಲ್ : ಮಾನ್ಯ ಅಧ್ಯಕ್ಷರೇ, ಗೈರು ಖಾನೂನಾಗಿ ರೈತರಿಂದ ಮಾರುಕಟ್ಟೆಯಲ್ಲಿ ಸುಮಾರು ನೂರಾರು ಕೋಟಿ ರೂಪಾಯಿಗಳನ್ನು ದಲಾಲಿ ವಸೂಲು ಮಾಡುತ್ತಿದ್ದಾರೆ ಎನ್ನುವುದನ್ನು ಸರ್ಕಾರವೇ ಒಪ್ಪಿ ಅದನ್ನು ತಡೆಗಟ್ಟುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಇನ್ನೂ ಕೂಡ ಸರ್ಕಾರ ಪರಿಶೀಲಿಸುತ್ತಿದೆ ಎನ್ನುವ ಉತ್ತರ ಕೊಟ್ಟಿರುವುದು ಅಷ್ಟು ಸಮಂಜಸ ಎನಿಸುವುದಿಲ್ಲ. ಆದ್ದರಿಂದ ಮಂತ್ರಿಗಳು ಇದರ ಬಗ್ಗೆ ನಿಶ್ಚಿತ ದಿನಾಂಕವನ್ನು ಹೇಳಬೇಕು.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಕೇಳಿದ ಹಾಗೆ ನಿಶ್ಚಿತ ದಿನಾಂಕವನ್ನು ಕೊಡುವುದಕ್ಕಾಗುವುದಿಲ್ಲ. ತಾವೇನು ಒಂದು ಪ್ರಶ್ನೆಯನ್ನು ಹಾಕಿದ್ದೀರಿ, ಇದು ಬಹಳ ಒಳ್ಳೆಯದು. ಇದು ರೈತರಿಗೆ ಅನುಕೂಲವಾಗುವಂಥ ಒಂದು ಕಾರ್ಯಕ್ರಮ. ಸನ್ಮಾನ್ಯ ಮುಖ್ಯಮಂತ್ರಿಗಳು ಕೂಡ ಬೆಳಗಾಂನಲ್ಲಿ ಹೇಳಿದ್ದನ್ನು ಹಿಂದೂ ಪತ್ರಿಕೆಯಲ್ಲಿ ಬಂದಿದ್ದನ್ನು ನಾನು ಓದಿದೆ. ನಮಗೆ ಇನ್ನೂ ಆದೇಶ ಬಂದಿಲ್ಲ. ಇದರ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸುತ್ತಿದ್ದೇವೆ. ಈ ಒಂದು ಕಾರ್ಯಕ್ರಮವನ್ನು ನಾವು ಮಾಡಬೇಕಾದರೆ ಎಪಿಎಂಸಿ ವತಿಯಿಂದ ಹಣವನ್ನು ಕೊಡಬೇಕಾದರೆ ನಮಗೆ ಈಗ ಇರತಕ್ಕಂಥ ಸಿಬ್ಬಂದಿ ಕೂಡ ಸಾಕಾಗುವುದಿಲ್ಲ. ನಮಗೆ ಇದಕ್ಕೆ ಕೋಟಿಗಟ್ಟಲೆ ಹಣ ಕೂಡ ಬೇಕಾಗುತ್ತದೆ. ನಮ್ಮ ಕರ್ನಾಟಕ